ಕಮಲಾನೆಹರು ಸ್ಯಾನಿಟೋರಿಯಂ ಆಸ್ಪತ್ರೆ ಕೋಲಾರ ಇದಕ್ಕೆ 1999-2000ನೇ ಸಾಲಿಗೆ 0.38 ಲಕ್ಷ ರೂ.ಗಳ ಅನುದಾನ ಒದಗಿಸಲಾಗಿತ್ತು ಹಾಗೂ 2000-2001ನೇ ಸಾಲಿಗೆ 10ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಈ ಆಸ್ಪತ್ರೆಯ ಅಭಿವೃದ್ಧಿ ಕಾಮಗಾರಿಗಳಿಗಾಗಿ 13.50 ಲಕ್ಷ ರೂ.ಗಳ ಅನುದಾನವನ್ನು ವಿನಿಯೋಗಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಅಥಣಿ ಪಟ್ಟಣದ ಶಾಲೆಯ ಬಗ್ಗೆ ಹಾಗೂ ನಿವೇಶನ ರಹಿತ ಶಾಲೆಗಳಿಗೆ ನಿವೇಶನ ನೀಡುವ ಕುರಿತು.

2395(2986)

ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಅಥಣಿ ಪಟ್ಟಣದಲ್ಲಿ ಹಿಂದಿನ ಶಾಲಾ ಜಾಗೆಯಲ್ಲಿ ಕಾಂಪ್ಲೆಕ್ಸ್ ಕಟ್ಟುತ್ತಿರುವುದಾಗಿ ತಿಳಿದು ಬಂದಿದ್ದು, ಬೋರ್ಡ್ ಶಾಲೆಗಳು, ಮುನ್ಸಿಪಾಲ್ಟಿ ಶಾಲೆಗಳು, 1969ರಲ್ಲಿ ಸರಕಾರಕ್ಕೆ ಈಗಾಗಲೇ ಹಸ್ತಾಂತರವಾಗಿ ಅವುಗಳ ಆಸ್ತಿ, ಚಿರಾಸ್ತಿ ಶಿಕ್ಷಣ ಇಲಾಖೆಯದ್ದಾಗಿರುತ್ತದೆ. ಕಾರಣ ಈ ಮೇಲ್ಕಾಣಿಸಿದ ವಿಷಯದ ಬಗ್ಗೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ.

ಆ) ನಿವೇಶನ ರಹಿತ ಶಾಲೆಗಳಿಗೆ ನಿವೇಶನ ನೀಡಲಾಗುತ್ತಿದ್ದು, ಆದರೆ ಇತ್ತೀಚೆಗೆ ಸರ್ಕಾರಿ ಆದೇಶ ಸಂಖ್ಯೆ ಆರ್.ಡಿ.23 ಎಲ್‌ಜಿಎಫ್ 99 ದಿನಾಂಕ:26.5.1999ರ ಪ್ರಕಾರ ಗೋಮಾಳ ಜಮೀನು ಮಂಜೂರಿ ನೀಡದಿರಲು ಆದೇಶವಾಗಿದ್ದರಿಂದ ನಿವೇಶನ ರಹಿತ ಶಾಲೆಗಳಿಗೆ ನಿವೇಶನ ಸರಕಾರದಿಂದ ಸಿಗುವುದು ಕಠಿಣವಾಗುತ್ತದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಬೆಳಗಾಂ ಜಿಲ್ಲೆ ಅಥಣಿ ಪಟ್ಟಣದ ಹಿಂದಿನ ಶಾಲಾ ಜಾಗದಲ್ಲಿ ವ್ಯಾಪಾರ ಮಳಿಗೆ ಕಟ್ಟುತ್ತಿರುವುದು ತಿಳಿದು ಬಂದಿದ್ದು ಸದರಿ ಜಾಗ ಶಿಕ್ಷಣ ಇಲಾಖೆ ಕಬ್ಜಾ ವಹಿವಾಟಿನಲ್ಲಿದ್ದು ಇದು ಶಾಲಾ ಕಟ್ಟಡಕ್ಕೆ ಅವಶ್ಯವಿದ್ದುದರಿಂದ ವ್ಯಾಪಾರ ಮಳಿಗೆ ಕಟ್ಟಡ ಕಾರ್ಯಕ್ಕೆ ತಡೆಯಾಜ್ಞೆ ನೀಡಬೇಕೆಂದು ಜಿಲ್ಲಾಧಿಕಾರಿಯವರಿಗೆ ಕ್ಷೇತ್ರ ಶಿಕ್ಷಣಾಧಿಕಾರಿ, ಅಥಣಿ ಇವರು ಕೋರಿದ್ದಾರೆ.

ಆ) ಪ್ರತಿಯೊಂದು ಪ್ರಕರಣಗಳಲ್ಲಿ ಸರ್ಕಾರಿ ಶಾಲಾ ಕಟ್ಟಡಗಳಿಗೆ ನಿವೇಶನವನ್ನು

ಪಡೆಯಲು ಕಂದಾಯ ಇಲಾಖೆಯೊಡನೆ ಸಮಾಲೋಚಿಸಿ ಕ್ರಮ ಕೈಗೊಳ್ಳಲಾಗುವುದು.

ವರ್ಷದಲ್ಲಿ ಶಾಲೆಗಳು ನಡೆಯುವ ವಿಚಾರ ಕುರಿತು.

2396(2987)

ಶ್ರೀ ಉಮೇಶ್ ವಿಶ್ವನಾಥ ಕತ್ತಿ (ಹುಕ್ಕೇರಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 18 ವರ್ಷ ಮೇಲ್ಪಟ್ಟ ಮತದಾರರ ಯಾದಿ ತಯಾರಿಕೆ ಒಂದು ತಿಂಗಳು, ಡ್ರಾಪ್ ಔಟ್ ಮಕ್ಕಳ ಆಂದೋಲನ ಮೆರವಣಿಗೆ, 18 ವರ್ಷ ಮೇಲ್ಪಟ್ಟ ಮತದಾರರ ಯಾದಿ ಪರಿಷ್ಕರಣೆ, ಚುನಾವಣೆ ಡ್ಯೂಟಿ ಪಲ್ಸ್ ಪೋಲಿಯೋ ಡ್ಯೂಟಿ, ಶಕ್ತಿ ಮಕ್ಕಳ ಗಣತಿ ಡ್ಯೂಟಿ, ಎಸ್.ಎಸ್.ಎಲ್.ಸಿ. ಪರೀಕ್ಷೆ ಮೇಲ್ವಿಚಾರಕರ ಡ್ಯೂಟಿ, ಹೊಂ ಅಸ್ಪಿಂಗ್ ಮತ್ತು ಗಣತಿ ಟ್ರೈನಿಂಗ್, ಮನೆ ಗಣತಿ ಮತ್ತು ಕುಟುಂಬಗಳ ಗಣತಿ ಪ್ರತಿ ತಿಂಗಳು, ಗೋದಿ ವಿತರಣೆ 1 ದಿನ, ಸಿ ಆರ್ ಸಿ ಟ್ರೈನಿಂಗ್ ಒಂದು ದಿವಸ, ಸ್ಕೌಟ್ ಗೈಡ್ ಟ್ರೈನಿಂಗ್ ಒಂದು ದಿವಸ ಡಿ.ಪಿ.ಇ.ಪಿ. ಟ್ರೈನಿಂಗ್ ಒಂದು ದಿವಸ, ಧಾರ್ಮಿಕ ಹಬ್ಬಗಳ ರಜೆ, ರಾಷ್ಟ್ರೀಯ ಹಬ್ಬದ ರಜೆ ದಿನಗಳು ಭಾನುವಾರಗಳು, ಇತ್ಯಾದಿ ಶಿಕ್ಷಕರಿಗೆ ವಹಿಸುವ ಕಾರ್ಯ ವ್ಯಾಪ್ತಿಯಿಂದ ಶಿಕ್ಷಣದ ಮಟ್ಟ ಎಷ್ಟರ ಮಟ್ಟಿಗೆ ಅಭಿವೃದ್ದಿ ಹೊಂದುವುದೆಂದು ಸರಕಾರ ಆಲೋಚಿಸಿದೆಯೇ?

ಆ) ಆಲೋಚಿಸಿದ ಪಕ್ಷದಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು?

ಇ) ಇನ್ನು ಮುಂದೆಯಾದರೂ ಎಚ್ಚೆತ್ತುಕೊಂಡು ಬೇರೆ ಇಲಾಖಾ ನೌಕರರುಗಳಿಂದ ಮೇಲ್ಕಾಣಿಸಿದ ಸರಕಾರ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವೇ?

ಈ) ಇನ್ನಾದರೂ ಶಿಕ್ಷಣದ ಮಟ್ಟವನ್ನು ಉತ್ತಮಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಸ್ಕೌಟ್ ಗೈಡ್, ಟ್ರೈನಿಂಗ್, ಸಿ.ಆರ್.ಸಿ. ಟ್ರೈನಿಂಗ್, ಡಿಪಿಇಪಿ ಟ್ರೈನಿಂಗ್, ಮಕ್ಕಳ ಗಣತಿ ಡ್ಯೂಟಿ, ಗೋಧಿ ವಿತರಣೆ, ಡ್ರಾಪೌಟ್ ಮಕ್ಕಳ ಆಂದೋಳನ, ಮೆರವಣಿಗೆ ಪಲ್ಸ್ ಪೋಲಿಯೋ ಡ್ಯೂಟಿ, ಈ ಮೊದಲಾದ ಕಾರ್ಯಕ್ರಮಗಳು ಮಕ್ಕಳ ಶಿಕ್ಷಣ ಮತ್ತು ಆರೋಗ್ಯಕ್ಕೆ ಪೂರಕವಾದ ಕಾರ್ಯಕ್ರಮಗಳು ಹಾಗೂ ಮತದಾರರ ಯಾದಿಪರೀಕ್ಷಣೆ, ಪರೀಕ್ಷೆ ಮೇಲ್ವಿಚಾರಕರ ಡ್ಯೂಟಿಗಳು, ಗಣತಿ ಟ್ರೈನಿಂಗ್ ಈ ಕಾರ್ಯಕ್ರಮಗಳು ಸಾರ್ವತ್ರಿಕ ರಜಾ ದಿವಸಗಳಲ್ಲಿ ಕೈಗೊಳ್ಳಲಾಗುವ ರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು